**ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ , ಕಾರವಾರ**

ಅ.ದಾ.ನಂಃ 1-2015 ಪಿಡಬ್ಲ್ಯೂಃ 1

ಸಾಕ್ಷಿಯ ಹೆಸರು ಲಲಿತಾ ಮಾರುತಿ ನಾಯ್ಕ

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 04-**11-2019**

**ಪಾಟಿ ಸವಾಲು ಃ ಶ್ರೀ ಎಮ್ ಎಲ್ ಎನ್ ಹೆಚ್ ವಕೀಲರಿಂದ 1 ನೇ ಪ್ರತಿವಾದಿ ಪರವಾಗಿ ಃ**

ನಾನು ನಿಪಿ-8 ವಚನ ಪತ್ರ ಅಥವಾ ನಿಪಿ-9 ವಚನ ಪತ್ರ ಆಗುವ ಸಮಯದಲ್ಲಾಗಲೀ ಅಥವಾ ಮಾತುಕತೆಯ ಸಮಯದಲ್ಲಾಗಲೀ ಹಾಜರಿರಲಿಲ್ಲ ಎಂದರೆ ಸರಿ . ನಾನು ವೈಯಕ್ತಿಕವಾಗಿ ವಚನ ಪತ್ರ ಮಾಡಿಕೊಟ್ಟವರಿಗೆ ಹಣ ನೀಡಿಲ್ಲ ಎಂದರೆ ಸರಿ . ಸಾಕ್ಷಿಯು ಮುಂದುವರಿದು ನನ್ನ ಗಂಡ ನೀಡಿದ್ದಾರೆ ಎಂದು ನುಡಿಯುತ್ತಾರೆ. ನಿಪಿ-8 ಮತ್ತು 9 ವಚನ ಪತ್ರದಲ್ಲಿ ಹಣ ನೀಡಿದ್ದಾರೆ ಎಂದು ಬರೆದಿದ್ದರಿಂದ ನಾನು ಆ ರೀತಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ. ನಿಪಿ-8 ಮತ್ತು 9 ವಚನ ಪತ್ರವನ್ನು ಬರೆದು ಕೊಟ್ಟ ವ್ಯಕ್ತಿಗಳೇ ಆಸ್ತಿಯ ಕಬ್ಜಾ ವಹಿವಾಟಿಗಳಲ್ಲಿ ಇದ್ದಾರೆ ಎಂದರೆ ಸರಿ . ಸಾಕ್ಷಿಯು ಮುಂದುವರಿದು ನಾವು 1982 ರಿಂದ ಮನೆ ಕಟ್ಟಿಕೊಂಡು ವಾಸಿಸುತ್ತಿದ್ದೇವೆ ಎಂದು ನುಡಿಯುತ್ತಾರೆ. ನಾನು ನನ್ನ ಪ್ರಕಾರ 1982 ರಿಂದ ಮನೆ ಕಟ್ಟಿಕೊಂಡು ವಾಸಿಸುವ ಬಗ್ಗೆ ಯಾವುದೇ ದಾಖಲಾತಿಗಳು ಇಲ್ಲ ಎಂದರೆ ಸರಿ . ನಾನು ಕಟ್ಟಿಕೊಂಡ ಮನೆ ವಚನ ಪತ್ರದಲ್ಲಿ ನಮೂದಿಸಿದ ಆಸ್ತಿಯಲ್ಲಿದೆ ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ .

2. ದಾವಾ ಆಸ್ತಿಯ ಅಕ್ಕಪಕ್ಕ ನಮಗೆ ಸೇರಿದ ಆಸ್ತಿಗಳಿವೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಪ್ರಕಾರ ಕಟ್ಟಿಕೊಂಡ ಮನೆ ವಚನ ಪತ್ರದಲ್ಲಿ ನಮೂದಿಸಿದ ಆಸ್ತಿಯಲ್ಲಿ ಇಲ್ಲ ಬೇರೆ ಕಡೆ ಇದೆ ಎಂದರೆ ನನಗೆ ಗೊತ್ತಿಲ್ಲ . ನಾನು ನಿಪಿ 8 ಮತ್ತು 9 ವಚನ ಪತ್ರಗಳನ್ನು ಓದಿ ನೋಡಿದ್ದೇನೆ . ಸಾಕ್ಷಿಗೆ ಈಗ ನಿಪಿ 8 ಮತ್ತು 9 ನ್ನು ತೋರಿಸುತ್ತಿದ್ದು , ಅದರಲ್ಲಿ 1 ಮತ್ತು 2 ನೇ ಪ್ರತಿವಾದಿಯವರ ಸಹಿ ಇಲ್ಲ ಎಂದರೆ ಸಾಕ್ಷಿಯು ಅವರು ವಟಮುಕ್ತಾರ ನಾಮೆ ನೀಡಿದ್ದಾರೆ ಎಂದು ನುಡಿಯುತ್ತಾರೆ . ವಟಮುಕ್ತಾರ ನಾಮೆಯನ್ನು ನಾನು ನೋಡಿದ್ದೇನೆ ಎಂದರೆ ಇಲ್ಲ ಎಂದು ಸಾಕ್ಷ ನುಡಿಯುತ್ತಾರೆ. ಸಾಕ್ಷಿಯು ಮುಂದುವರಿದು ಮೂಲವಾದಿ ಇದ್ದಾಗ ಮಾಡಿದ್ದು ಎಂದು ನುಡಿಯುತ್ತಾರೆ. ವಟಮುಕ್ತಾರ ನಾಮೆ ನಿಪಿ 8 ಮತ್ತು 9 ವಚನ ಪತ್ರ ಮಾಡುವ ಸಮಯದಲ್ಲಿ ಚಾಲ್ತಿಯಲ್ಲಿತ್ತೆ ಎಂದರೆ ಇತ್ತು ಎಂದು ಸಾಕ್ಷಿಯು ನುಡಿಯುತ್ತಾರೆ. ನನ್ನ ಪ್ರಕಾರ ಒಂದು ಮತ್ತು ಎರಡನೇ ಪ್ರತಿವಾದಿಯವರು ಮಾಡಿದ ವಟಮುಕ್ತಾರ ನಾಮೆಯ ಪ್ರತಿಯನ್ನು ನಿಪಿ-8 ಮತ್ತು 9

ವಚನ ಪತ್ರ ಮಾಡುವ ಸಮಯದಲ್ಲಿ ಮೂಲವಾದಿಯ ಪಡೆದ್ದೀರಾ ಎಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ನಾನಾಗಲಿ ಅಥವಾ ಮುಲವಾದಿಯಾಗಲಿ ನಾನು ಹೇಳಿದ ವಟಮುಕ್ತಾರ ನಾಮೆಯ ಪ್ರತಿಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿದ್ದೇವಾ ಎಂದರೆ ಗೊತ್ತಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ಮೂಲವಾದಿಯು ಸಲ್ಲಿಸಿದ ದಾವೆಯನ್ನು ನಾನು ಓದಿ ತಿಳಿದುಕೊಂಡಿದ್ದೇನೆ . ವಾದಪತ್ರದಲ್ಲಿ ಬರೆದ ಅಂಶಗಳಿಗೆ ನನ್ನ ಯಾವುದೇ ತಕರಾರು ಇಲ್ಲ ಎಂದರೆ ಸರಿ . ವಾದ ಪತ್ರದ ಎಂಟನೇ Paragraph ನಲ್ಲಿ ಬರೆದ ಅಂಶಗಳು ಸರಿ ಇದೆ . ಮೂರನೇ ಪ್ರತಿವಾದಿಯು ಊರಲ್ಲಿ ಒಂದನೇ ಪ್ರತಿವಾದಿಯವರು ತನ್ನ ಹೆಸರಿಗೆ ವಟಮುಕ್ತಾರ ನಾಮೆಯನ್ನು ಬರೆದುಕೊಟ್ಟಿದ್ದಾರೆ ಎಂದು ಹೇಳಿಕೊಂಡಿದ್ದರಿಂದ ಒಂದನೇ ಪ್ರತಿವಾದಿಯವರು ನಿಪಿ 8 ಮತ್ತು 9 ವಚನ ಪತ್ರಗಳಾಗುವ ಪೂರ್ವದಲ್ಲಿಯೆ ಸದ್ರಿ ವಟಮುಕ್ತಾರ ನಾಮೆಯನ್ನು ರದ್ದುಪಡಿಸಿದ್ದಾರೆ ಎಂದರೆ ಸರಿಯಲ್ಲ. ಒಂದನೇ ಪ್ರತಿವಾದಿಯು ಯಾವುದೇ ವಚನ ಪತ್ರವನ್ನು ಬರೆದು ಕೊಟ್ಟಿಲ್ಲವಾಗಿದ್ದರಿಂದ ಮತ್ತು ಯಾವುದೇ ಹಣವನ್ನು ಪಡೆದಿಲ್ಲವಾಗಿಧ್ದು ಅವರು ಯಾವುದೇ ಕ್ರಯದ ಪತ್ರವನ್ನು ಬರೆದು ಕೊಡಲು ಬಾಧ್ಯಸ್ತರಲ್ಲ ಎಂದರೆ ಸರಿಯಲ್ಲ.

3. ವಚನ ಪತ್ರದಲ್ಲಿ ನಮೂದಿಸಿದ ಆಸ್ತಿಗಳು ರೈತ ಹಕ್ಕಿನ ಆಸ್ತಿಗಳು ಎಂದರೆ ಸರಿ . ಪರಾಧೀನ ಮಾಡಬೇಕೆಂದು ಶರತ್ತು ಕಡಿಮೆಯಾಗಿದ್ದು 20-03-1995 ರಂದು ಎಂದರೆ ಸರಿ .20-03-1995 ರಿಂದ 2015 ರವರೆಗೆ ದಾವೆಯನ್ನು ಸಲ್ಲಿಸಲು ಏನಾದರು ತೊಂದರೆ ಇತ್ತೆ ಎಂದರೆ ಸಾಕ್ಷಿಯು ಮೂರನೇ ಪ್ರತಿವಾದಿಯು ಕ್ರಯದಸ್ತನ್ನು ಮಾಡಿಕೊಡುವುದಾಗಿ ಹೇಳಿದ್ದರಿಂದ ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ .

4. ಪ್ರತಿವಾದಿಯವರು ದಾವಾ ಆಸ್ತಿಯನ್ನು 05-02-2012 ರಂದು ವಾಟನಿ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . ಒಂದನೇ ಪ್ರತಿವಾದಿಯ ಯಾವುದೇ ವಚನ ಪ್ರಮಾಣ ಪತ್ರ ಮಾಡಿಕೊಟ್ಟಿಲ್ಲವಾಗಿದ್ದು ಆದ ಕಾರಣ ಅದಕ್ಕೆ ಆತನು ಬಾಧ್ಯಸ್ತ ಅಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಎರಡನೇ ಪ್ರತಿವಾದಿಯ ಪರ ವಕೀಲರು ಸಮಯಾವಕಾಶ ಕೇಳಿದ್ದರಿಂದ ಸಮಯಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು).**

**ಓ. ಹೇ.ಕೇ. ಸರಿ ಇದೆ.**

ಪ್ರ. ಸಿವಿಲ್ ಜಡ್ಜ, ಕಾರವಾರ